ದಿನಾಂಕ:10.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು:ವಾದಿ ಪರ ವಕೀಲರಿಂದ:**

ಸದರಿ ದಾವೆಯನ್ನು ಯಾವ ಕಾರಣಕ್ಕೆ ಹೂಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. exchange deed ಆದಾಗ ನನಗೆ ಸುಮಾರು19 ವರ್ಷ ವಯಸ್ಸು. ಸದರಿ exchange deed ಆಗಬೇಕಾದ ಸಮಯದಲ್ಲಿ ಅದರ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ. ಸದರಿ ದಾವೆಯನ್ನು ಹೂಡಿದ್ದಾಗ ನನ್ನ ತಂದೆ ನನಗೆ ಒಮ್ಮೆ ಸದರಿ exchange deed ರ ಬಗ್ಗೆ ತಿಳಿಸಿದ್ದರು. exchange deed ಆದನಂತರ ದಾವಾ ಸ್ವತ್ತಿನ ಎ ಶೆಡ್ಯೂಲ್ ಸ್ವತ್ತು ಭಾರತಿಯವರಿಗೆ ಹಾಗೂ ಬಿ ಶೆಡ್ಯೂಲ್ ಸ್ವತ್ತು ನನ್ನ ತಂದೆಯಾದ ಕೃಷ್ಣಮೂರ್ತಿ ರವರಿಗೆ ಸೇರಿರುತ್ತದೆ. ಎ ಶೆಡ್ಯೂಲ್ ಸ್ವತ್ತಿನ ಡೈಮೆನ್ಶನ್ 30X60 ಮತ್ತು ಬಿ ಶೆಡ್ಯೂಲ್ ಸ್ವತ್ತಿನ ಡೆಮೆನ್ಶನ್ 25X40 ಆಗಿರುತ್ತದೆ. ನಿಪಿ-1 ರ ಪ್ರಕಾರ ಎ ಮತ್ತು ಬಿ ಶೆಡ್ಯೂಲ್ ಸ್ವತ್ತುಗಳ ಬೆಲೆ ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಸ್ವತ್ತಿನ ಮಾರ್ಕೆಟ್ ವ್ಯಾಲ್ಯೂ ಹೆಚ್ಚು ಆಗಿರುತ್ತದೆ. ನಿಪಿ-1 ರ ಪ್ರಕಾರ ಎ ಶೆಡ್ಯೂಲ್ ಸ್ವತ್ತಿನ ಬೆಲೆ ಎರಡು ಲಕ್ಷದ ಎಪ್ಪತ್ತು ಸಾವಿರ ಹಾಗೂ ಬಿ ಶೆಡ್ಯೂಲ್ ಸ್ವತ್ತಿನ ಬೆಲೆ ಒಂದು ಲಕ್ಷದ ಇಪ್ಪತ್ತೆಂಟು ಸಾವಿರ ಆಗಿರುತ್ತದೆ ಎಂದರೆ ಸರಿ. exchange deed ಅನ್ನು ಯಾವ ಕಾರಣಕ್ಕೆ ಮಾಡಿಕೊಂಡಿರುತ್ತಾರೆ ಎಂದರೆ, ಮನೆ ಕಟ್ಟುವ ಸಲುವಾಗಿ ಆಗಿರುತ್ತದೆ ಎಂದು ನನ್ನ ತಂದೆ ತಿಳಿಸಿರುತ್ತಾರೆ. ಎ ಶೆಡ್ಯೂಲ್ ಸ್ವತ್ತು ಎ.ಪಿ.ಎಮ್.ಸಿ ಶಿರಾದ ಪಕ್ಕದಲ್ಲಿ ಬರುತ್ತದೆ ಎಂದರೆ ಸರಿ. ಬಿ ಶೆಡ್ಯೂಲ್ ಸ್ವತ್ತು ಶಿರಾ ಅಮರಾಪುರ ರಸ್ತೆಯ ಬಳಿ ಬರುತ್ತದೆ ಎಂದರೆ ಸರಿ. ನನ್ನ ತಂದೆಯವರು ಬಿ ಶೆಡ್ಯೂಲ್ ಸ್ವತ್ತು commercial land ಆದಕಾರಣ ಒತ್ತಾಯ ಮಾಡಿ exchange deed ಅನ್ನು ಬರೆಸಿಕೊಂಡರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿ ನನ್ನ ತಂದೆಯವರು ನಿಪಿ-2 ರಲ್ಲಿ ನಮೂದು ಮಾಡಿದ್ದಾರೆ ಎಂದರೆ ಸರಿ. ದಾವಾ ಸ್ವತ್ತುಗಳ ಮೇಲೆ ಅವರವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ. ಸದರಿ ಖಾಲೆ ಬದಲಾವಣೆಯ ದಿನಾಂಕ ನನಗೆ ನಿಖಾರವಾಗಿ ನೆನಪಿರುವುದಿಲ್ಲ, ಸುಮಾರು 2009 ಆಗಿರಬಹುದು ಎಂದು ನುಡಿದಿರುತ್ತಾರೆ. 2009 ರಲ್ಲಿ ಆದ ಖಾತೆಯನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. exchange deed ರ ಪ್ರಕಾರಣ ಖಾತೆ ಮಾಡಲು ಅರ್ಜಿ ಕೊಟ್ಟಾಗ ನಗರಸಭೆಯವರು ವಾದಿಗೆ ತಕರಾರು ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-7 ರ ಪ್ರಕಾರ OS.1/2011 ರಲ್ಲಿ ಸದರಿ ದಾವಾ ಸ್ವತ್ತಿನ ಮೇಲೆ ದಾವೆ ಇದೆ ಎಂದು ಹೇಳಿ ನಗರಸಭೆಯವರು ತಕರಾರನ್ನು ಮಾಡಿದ್ದಾರೆ ಎಂದರೆ ಸಾಕ್ಷಿಯು 2009 ರಲ್ಲಿ exchange deed ಆಗಿರುತ್ತದೆ, ಆ ಸಮಯದಲ್ಲಿ ದಾವಾ ಆಸ್ತಿಯ ಮೇಲೆ ಯವುದೇ ವ್ಯಾಜ್ಯ ಇರಲಿಲ್ಲ ಎಂದು ನುಡಿದಿರುತ್ತಾರೆ. ವಾದಿಯು ನನ್ನ ತಂದೆಯವರಿಗೆ ದಾವಾ ಸ್ವತ್ತಿನ ಮೇಲೆ ವ್ಯಾಜ್ಯ ಇರುವ ವಿಷಯವನ್ನು ತಿಳಿಸಿ ಬಗೆಹರಿಸಿಕೊಡಲು ತಿಳಿಸಿದರು ಎಂದರೆ ನನಗೆ ಗೊತ್ತಿಲ್ಲ. ಆಗ ವಾದಿಯು ನನ್ನ ತಂದೆಗೆ ಲೇಗಲ್ ನೋಟಿಸ್ ಅನ್ನು ಕಳುಹಿಸಿದರು ಎಂದರೆ ನನಗೆ ಗೊತ್ತಿಲ್ಲ.

ಸದರಿ ನೋಟಿಸ್ ನನ್ನ ತಂದೆಗೆ ಜಾರಿಯಾಯಿತು ಎಂದರೆ ನನಗೆ ಗೊತ್ತಿಲ್ಲ. ಆಗಲೂ ನನ್ನ ತಂದೆಯವರು ಸಮಸ್ಯೆಯನ್ನು ಬಗೆಹರಿಸಿಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಸುಳ್ಳು ಹೇಳಿ ವಾಜ್ಯ ಇರುವ ಸ್ವತ್ತನ್ನು exchange deed ಮಾಡಿದ್ದಾರೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಸ್ವತ್ತು ನನ್ನ ಚಿಕ್ಕಪ್ಪ ಮಾಡಿರುವ ಲೇಔಟ್ ಎಂದರೆ ಸರಿ. ಆದ್ದರಿಂದ ಅದು ಲಿಟಿಗೇಶನ್ ಆಸ್ತಿ ಎಂದು ನನ್ನ ತಂದೆಯವರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಎ ಮತ್ತು ಬಿ ಶೆಡ್ಯೂಲ್ ಸ್ವತ್ತುಗಳು ಖಾಲಿ ನಿವೇಶನಗಳು ಎಂದರೆ ಸರಿ. ನಮ್ಮ exchange deed ರದ್ದು ಮಾಡಲು ನನಗೆ ಯವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಿಡಿ-1 ರ ಖಾತೆಯನ್ನು ನನ್ನ ತಂದೆಯವರು ಮಾಡಿಸಿದ್ದರು. ನಿಡಿ-1 2021 ರ ಸಾಲಿನದ್ದು ಎಂದರೆ ಸರಿ. ಶ್ರೀನಿವಾಸ್‌ಚಾರ್ ರವರು ನನ್ನ ಚಿಕ್ಕಪ್ಪ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತುಗಳು ಮೂಲತಃ ನನ್ನ ಚಿಕ್ಕಪ್ಪರವರವು ಎಂದರೆ ಸರಿ. exchange deed ಪ್ರಕಾರ ದಾವಾ ಹೂಡುವ ಮುನ್ನ ಖಾತೆ ಬದಲಾವಣೆಗಳು ಆಗಿವೆ ಎಂದು ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ಕೇವಲ demand register extract ಎಂದರೆ ನನಗೆ ಗೊತ್ತಾಗುವುದಿಲ್ಲ. ನಿಡಿ-1 ರಲ್ಲಿ ವಿಸ್ತೀರ್ಣ, ಚೆಕ್ಕು ಬಂಧಿ ನಮೂದಾಗಿಲ್ಲ ಎಂದರೆ ಸಾಕ್ಷಿಯು ವಿಸ್ತೀರ್ಣ ನಮೂದಾಗಿದೆ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತುಗಳ ಮೇಲೆ ಯಾವುದೇ ಖಾತೆಯಾಗಿಲ್ಲ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ 7.5X12 ಮೀಟರ್ ಎಂದು ನಮೂದಾಗಿದೆ ಎಂದರೆ ಸರಿ. ಸದರಿ ಸ್ವತ್ತು e-ಸ್ವತ್ತು ಆಗಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳ E-Katha ಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿಯು ದಾವಾ ಸ್ವತ್ತಿಗೆ ಇನ್ನೂ E-Katha ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾವು ವಾದಿಗೆ ಮೋಸ ಮಾಡಿ ವ್ಯಾಜ್ಯದ ಸ್ವತ್ತನ್ನು ಅದಲು-ಬದಲು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.